# ಅಧ್ಯಾಯ–V

# ಹಣಕಾಸು ನಿರ್ವಹಣೆ

# ಅಧ್ಯಾಯ–V

## ಹಣಕಾಸು ನಿರ್ವಹಣೆ

*ಮಂಡಳಿಯು ಪ್ರತಿ ವರ್ಷ ತನ್ನ ಆದಾಯ ಮತ್ತು ವೆಚ್ಚದ ಆಯವ್ಯಯ ಅಂದಾಜುಗಳನ್ನು ತಯಾರಿಸದ ಕಾರಣ ಮಂಡಳಿ ಮಟ್ಟದಲ್ಲಿ ಆಯವ್ಯಯ ನಿಯಂತ್ರಣದ ಕೊರತೆಯಿದ್ದಿತು ಮತ್ತು ಲಭ್ಯವಿರುವ ಹಣದ ಬಳಕೆಯ ವೇಗ, ಬಳಕೆ ಪ್ರಮಾಣಪತ್ರಗಳನ್ನು ಗಮನಿಸುವುದು, ಅನುಷ್ಠಾನ ಸಂಸ್ಥೆಗಳಿಗೆ ನೀಡಲಾದ ಮುಂಗಡಗಳ ಮೇಲ್ವಿಚಾರಣೆ ಇತ್ಯಾದಿಗಳಲ್ಲಿ ಸುಧಾರಣೆಯ ಅಗತ್ಯತೆಯಿದ್ದಿತು. ಈಗಾಗಲೇ ಬಿಡುಗಡೆಯಾದ ಹಣವನ್ನು ಬಳಕೆ ಮಾಡದ ಕಾರಣ ಮಂಡಳಿಯು ರಾಜ್ಯ ಸರ್ಕಾರದಿಂದ ₹387.52 ಕೋಟಿ ನೆರವನ್ನು ಕಳೆದುಕೊಂಡಿತ್ತು. ಅನುಷ್ಠಾನ ಏಜೆನ್ಸಿಗಳಿಗೆ ನೀಡಲಾದ ಮುಂಗಡಗಳ ಬಳಕೆಯನ್ನು ಮೇಲ್ವಿಚಾರಣೆ ಮಾಡಲು ಮಂಡಳಿಯು ಕಾರ್ಯವಿಧಾನವನ್ನು ಹೊಂದಿರಲಿಲ್ಲ ಮತ್ತು ಅನುಷ್ಠಾನ ಏಜೆನ್ಸಿಗಳು ಹೊಂದಿರುವ ಮಂಡಳಿಯ ಹಣದ ಮೇಲೆ ಗಳಿಸಿದ ಬಡ್ಡಿಯ ಪ್ರತ್ಯೇಕ ಲೆಕ್ಕವನ್ನು ಮತ್ತು ಅದರ ಸಮಯೋಚಿತ ಮರುಪಾವತಿಯನ್ನು ಖಚಿತಪಡಿಸಿಕೊಳ್ಳಲಿಲ್ಲ. ರಾಜ್ಯ ಸರ್ಕಾರವು ಲೆಕ್ಕಪರಿಶೋಧಕರನ್ನು ನೇಮಿಸಿರಲಿಲ್ಲವಾದ್ದರಿಂದ ರಾಜ್ಯ ಶಾಸಕಾಂಗದಲ್ಲಿ ಲೆಕ್ಕಪರಿಶೋಧನಾ ವರದಿಗಳನ್ನು ಸಲ್ಲಿಸಲು ಅನುಕೂಲವಾಗುವಂತೆ ಮಂಡಳಿಯ ಖಾತೆಗಳನ್ನು ಪ್ರಾರಂಭದಿಂದಲೂ ಚಾರ್ಟರ್ಡ್ ಅಕೌಂಟೆಂಟ್‌ರಿಂದ ಲೆಕ್ಕಪರಿಶೊಧನೆ ಮಾಡಲಾಗಿಲ್ಲ.*

### 5.1 ಮಂಡಳಿಯ ಹಣಕಾಸಿನ ಸ್ಥಿತಿ

ಮಂಡಳಿಯ ಆದೇಶ 2013ರ ಕಂಡಿಕೆ 21ರ ಅನ್ವಯ, ಈ ಕೆಳಗಿನವುಗಳು ಮಂಡಳಿಯ ಹಣದ ಭಾಗವಾಗಿದ್ದವು:

- ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಯಾವುದೇ ಸ್ಥಳೀಯ ಪ್ರಾಧಿಕಾರ, ಸಂಘಟಿತ ಅಥವಾ ಅಸಂಘಟಿತ ಸಂಸ್ಥೆಗಳು ಮಾಡಿದ ಎಲ್ಲಾ ಅನುದಾನಗಳು, ದೇಣಿಗೆಗಳು ಮತ್ತು ಉಡುಗೊರೆಗಳು
- ಮಂಡಳಿಯು ಸಾಲ ಪಡೆದ ಮೊತ್ತ; ಮತ್ತು
- ಯಾವುದೇ ಮೂಲದಿಂದ ಮಂಡಳಿಯು ಸ್ವೀಕರಿಸಿದ ಎಲ್ಲಾ ಇತರ ಮೊತ್ತಗಳು

ಪ್ರಾರಂಭವಾದಾಗಿನಿಂದಲೂ ರಾಜ್ಯ ಸರ್ಕಾರವು ಒದಗಿಸುವ ಅನುದಾನವನ್ನೇ ಮಂಡಳಿಯು ಅವಲಂಬಿಸಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು

ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿಗಾಗಿ ವಿವಿಧ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರವು ಮಂಡಳಿಗೆ ಆಯವ್ಯಯ ಅನುದಾನವನ್ನು ಬಿಡುಗಡೆ ಮಾಡುತ್ತದೆ. ಮಂಡಳಿಯ ನಿಧಿಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿನ ಬ್ಯಾಂಕ್ ಖಾತೆಗಳ ಮೂಲಕ ನಿರ್ವಹಿಸಲಾಗುತ್ತದೆ. 2016–17ರಿಂದ 2021–22ರ ಅವಧಿಯಲ್ಲಿ ಮಂಡಳಿಯ ಹಣಕಾಸು ಸ್ಥಿತಿಯನ್ನು **ಕೋಷ್ಟಕ–5.1ರಲ್ಲಿ** ತೋರಿಸಲಾಗಿದೆ.

**ಕೋಷ್ಟಕ–5.1 2016–17ರಿಂದ 2021–22ರ ಅವಧಿಯಲ್ಲಿ ಮಂಡಳಿಯ ಹಣಕಾಸು ಸ್ಥಿತಿ**

(₹ ಕೋಟಿಗಳಲ್ಲಿ)

| ವರ್ಷ | ಪ್ರಾರಂಭಿಕ ಶಿಲ್ಕು (ಎ) | ಆಯವ್ಯಯ ಹಂಚಿಕೆ (ಬಿ) | ವಾಸ್ತವವಾಗಿ ಸ್ವೀಕರಿಸಿದ ಮೊತ್ತ (ಸಿ) | ಗಳಿಸಿದ ಬಡ್ಡಿ (ಡಿ) | ಇತರೆ ಸ್ವೀಕೃತಿಗಳು (ಇ) | ಲಭ್ಯವಿದ್ದ ಒಟ್ಟು ಹಣ (ಎಫ್)=(ಎ)+(ಬಿ)+(ಸಿ)+(ಡಿ)+(ಇ) | ವೆಚ್ಚ (ಜಿ) | ಅಂತಿಮ ಶಿಲ್ಕು (ಹೆಚ್) = (ಎಫ್–(ಜಿ) |
|---|---|---|---|---|---|---|---|---|
| 2016–17 | 131.34 | 1,000.00 | 937.33 | 17.49 | 91.52 | 1,177.68 | 1,060.72 | 116.96 |
| 2017–18 | 116.96 | 1,000.00 | 840.19 | 24.71 | 45.74 | 1,026.93 | 740.46 | 286.47 |
| 2018–19 | 286.47 | 1,000.00 | 1,309.96 | 27.68 | 144.30 | 1,768.42 | 1,330.05 | 438.36 |
| 2019–20 | 438.36 | 1,500.00 | 1,125.00 | 19.97 | 1.73 | 1,585.06 | 1,245.24 | 339.82 |
| 2020–21 | 339.82 | 1,131.86 | 1,031.86 | 17.31 | 7.40 | 1,396.39 | 925.81 | 470.57 |
| 2021–22 | 470.57 | 1,492.97 | ಲಭ್ಯವಿಲ್ಲ | ಲಭ್ಯವಿಲ್ಲ | ಲಭ್ಯವಿಲ್ಲ | ಲಭ್ಯವಿಲ್ಲ | ಲಭ್ಯವಿಲ್ಲ | ಲಭ್ಯವಿಲ್ಲ |
| **ಒಟ್ಟು** | | **7,124.83** | **5,244.34** | **107.16** | **290.69** | **6,954.48** | **5,302.28** | |

ಆಧಾರ: ಮಂಡಳಿಯು ಒದಗಿಸಿದ ಮಾಹಿತಿ

ರಾಜ್ಯ ಸರ್ಕಾರವು ತನ್ನ ಆಯವ್ಯಯದಲ್ಲಿ ಹಣ ಮಂಜೂರು ಮಾಡಿದ ನಂತರ ಮಂಡಳಿಯು ವಾರ್ಷಿಕ ಕಾರ್ಯ ಯೋಜನೆಯನ್ನು ಪ್ರತಿ ವರ್ಷ ವಿಳಂಬವಾಗಿ ತಯಾರಿಸುತ್ತಿತ್ತು. ಮಂಡಳಿಯು ಲಭ್ಯವಿರುವ ಹಣವನ್ನು ಸಕಾಲದಲ್ಲಿ ವೆಚ್ಚ ಮಾಡಲು ಸಾಧ್ಯವಾಗದಿರುವುದು ನಿರಂತರ ಉಳಿತಾಯಗಳಲ್ಲಿ ಪರಿಣಮಿಸಿತ್ತು. ಅನುಷ್ಠಾನ ಏಜೆನ್ಸಿಗಳಿಗೆ ಮಾಡಿದ ಮುಂಗಡಗಳನ್ನು ಅಂತಿಮ ವೆಚ್ಚವಾಗಿಯೂ ಸಹ ಮಂಡಳಿಯು ಪರಿಗಣಿಸಿತ್ತು. ಅನುಷ್ಠಾನ ಏಜೆನ್ಸಿಗಳಿಗೆ ವಹಿಸಲಾದ ಹೆಚ್ಚಿನ ಸಂಖ್ಯೆಯ ಕಾಮಗಾರಿಗಳು ನಿಧಾನಗತಿಯಲ್ಲಿ ಸಾಗುತ್ತಿದ್ದುದರಿಂದ ಆ ಅಪೂರ್ಣ ಕಾಮಗಾರಿಗಳಿಗೆ ಬಿಡುಗಡೆಯಾದ ಮೊತ್ತವು ಅನುಷ್ಠಾನ ಏಜೆನ್ಸಿಗಳ ಬಳಿ ಬಳಕೆಯಾಗದೆ ಉಳಿದಿತ್ತು. ಸಮನ್ವಯದ ಅನುಪಸ್ಥಿತಿಯಲ್ಲಿ, ಅನುಷ್ಠಾನಗೊಳಿಸುವ ಏಜೆನ್ಸಿಗಳೊಂದಿಗೆ ವಾಸ್ತವವಾಗಿ ವೆಚ್ಚ ಮಾಡದ ಶಿಲ್ಕನ್ನು ನಿರ್ಣಯಿಸಲು ಲೆಕ್ಕಪರಿಶೋಧನೆಯಲ್ಲಿ ಸಾಧ್ಯವಾಗಲಿಲ್ಲ.

ಅನುಷ್ಠಾನಗೊಳಿಸುವ ಏಜೆನ್ಸಿಗಳಿಗೆ ಮುಂಗಡ ಹಣ ಬಿಡುಗಡೆ ಮಾಡುವುದನ್ನು 2017–18ರಿಂದ ನಿಲ್ಲಿಸಲಾಗಿದೆ ಮತ್ತು ಪ್ರಸ್ತುತ ಮಂಡಳಿಯು ಕಾಮಗಾರಿಗಳನ್ನು ಕೈಗೊಳ್ಳುವ ಟೆಂಡರ್ ಮಾಡದ ಏಜೆನ್ಸಿಗಳಿಗೆ ಮಾತ್ರ ಮುಂಗಡಗಳನ್ನು ಬಿಡುಗಡೆ ಮಾಡುತ್ತಿದೆ ಎಂದು ಸರ್ಕಾರವು ತಿಳಿಸಿತು (ಜುಲೈ 2022). 2017–18ರವರೆಗಿನ ಬಿಡುಗಡೆಗಳ ಸಮನ್ವಯ ವಿವರಗಳು ಮತ್ತು ಟೆಂಡರ್ ಮಾಡದ ಏಜೆನ್ಸಿಗಳಿಗೆ ಮಾಡಿರುವ ಬಿಡುಗಡೆಗಳ ಬಗೆಗಿನ ವಿವರಗಳನ್ನು ಮಂಡಳಿಯು ಒದಗಿಸದ ಕಾರಣ ಉತ್ತರವನ್ನು ಒಪ್ಪಲಾಗುವುದಿಲ್ಲ.

## 5.2 ಹಣಕಾಸಿನ ನಿರ್ವಹಣೆಯಲ್ಲಿ ನ್ಯೂನತೆಗಳು

### *5.2.1 ಮಂಡಳಿಯಿಂದ ಆಯವ್ಯಯವನ್ನು ತಯಾರಿಸದಿರುವುದು*

ಪ್ರತಿ ವರ್ಷ ತನ್ನ ಆದಾಯ ಮತ್ತು ವೆಚ್ಚದ ಆಯವ್ಯಯ ಅಂದಾಜನ್ನು ತಯಾರಿಸಿ ಅದನ್ನು ಮಂಡಳಿಯು ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕೆಂದು ಮಂಡಳಿಯ ಆದೇಶ, 2013ರ ಷರತ್ತು 29 ನಿಗದಿಪಡಿಸುತ್ತದೆ. ಮಂಡಳಿಯು ಆರಂಭದಿಂದಲೂ ಆಯವ್ಯಯ ಅಂದಾಜನ್ನು ತಯಾರಿಸದಿರುವುದನ್ನು ಗಮನಿಸಲಾಯಿತು. ಮಂಡಳಿಯಿಂದ ಆಯವ್ಯಯ ಪ್ರಸ್ತಾವನೆಗಳ ಅನುಪಸ್ಥಿತಿಯಲ್ಲಿ, ಆಯವ್ಯಯ ಅವಶ್ಯಕತೆಗಳ ಪ್ರಮಾಣವನ್ನು ನಿರ್ಣಯಿಸಲು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಇದು ರಾಜ್ಯ ಆಯವ್ಯಯವನ್ನು ತಯಾರಿಸುವಾಗ ಸರ್ಕಾರವು ತನ್ನದೇ ಆದ ಒಂದು ಮೊತ್ತದ ಆಯವ್ಯಯ ಹಂಚಿಕೆಯನ್ನು ಪ್ರಸ್ತಾವಿಸುವಲ್ಲಿ ಪರಿಣಮಿಸಿತು.

2019–20 ಮತ್ತು 2020–21ರ ಅವಧಿಯಲ್ಲಿ ಲೆಕ್ಕಶೀರ್ಷಿಕೆವಾರು ಆಯವ್ಯಯ ಅವಶ್ಯಕತೆಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ಸರ್ಕಾರವು ಉತ್ತರಿಸಿತು (ಜುಲೈ 2022).

2018–19ರವರೆಗೆ ಆಯವ್ಯಯ ಅಂದಾಜುಗಳನ್ನು ತಯಾರಿಸದ ಕಾರಣ ಉತ್ತರವನ್ನು ಒಪ್ಪಲಾಗುವುದಿಲ್ಲ. 2019–21ರಲ್ಲಿ ಸಲ್ಲಿಸಲಾದ ಆಯವ್ಯಯ ಅಂದಾಜುಗಳು ಕಾರ್ಯ ಯೋಜನೆಗಳನ್ನು ಆಧರಿಸಿರಲಿಲ್ಲ. ಬದಲಾಗಿ, ಮಂಡಳಿಯು ಒಟ್ಟು ಮೊತ್ತದ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಕಳುಹಿಸಿತು.

### *5.2.2 ಹಣದ ಕಡಿಮೆ ಬಳಕೆಯಿಂದ ನೆರವಿನ ನಷ್ಟ*

ಹಣಕಾಸು ಇಲಾಖೆಯಿಂದ ಹಣದ ಬಿಡುಗಡೆಯ ಷರತ್ತುಗಳ ಪ್ರಕಾರ ಕೊನೆಯ ಕಂತು ಬಿಡುಗಡೆ ಮಾಡುವ ಮೊದಲು, ಲಭ್ಯವಿರುವ ಹಣದ ಶೇಕಡಾ 75ರಷ್ಟನ್ನು ಬಳಸಬೇಕಾಗಿತ್ತು. 2016–17ರಿಂದ 2020–21ರ ಅವಧಿಯಲ್ಲಿ ಒಟ್ಟು ₹5,631.86 ಕೋಟಿ ಆಯವ್ಯಯ ಹಂಚಿಕೆಗೆ ಪ್ರತಿಯಾಗಿ ಸರ್ಕಾರದಿಂದ ಮಂಡಳಿಗೆ ವಾಸ್ತವ ಬಿಡುಗಡೆಯು ಕೇವಲ ₹5,244.34 ಕೋಟಿಯಾಗಿತ್ತು. ಹೀಗೆ ₹387.52 ಕೋಟಿ ನಷ್ಟದಲ್ಲಿ ಪರಿಣಮಿತು.

ಕೋವಿಡ್–19 ಸಾಂಕ್ರಾಮಿಕ ರೋಗದ ಕಾರಣದಿಂದಾಗಿ 2019–20ರ ಅವಧಿಯಲ್ಲಿ ಪ್ರಗತಿಯು ಕುಂಠಿತವಾಗಿತ್ತಾದ್ದರಿಂದ ನಾಲ್ಕನೇ ತ್ರೈಮಾಸಿಕ ಕಂತನ್ನು ಬಿಡುಗಡೆ ಮಾಡಿರಲಿಲ್ಲ ಎಂದು ಸರ್ಕಾರವು ತಿಳಿಸಿತು (ಜುಲೈ 2022). 2020–21ರ ಅವಧಿಯಲ್ಲಿ ₹1131.86 ಕೋಟಿ ಮಂಡಳಿಯ ಹಂಚಿಕೆಯಲ್ಲಿ ₹100.00 ಕೋಟಿಯನ್ನು ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಮತ್ತು ಸಾಂಸ್ಕೃತಿಕ ಸಂಘ ಕಲಬುರಗಿಗೆ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ. ಹೀಗಾಗಿ ಯಾವುದೇ ಕೊರತೆ ಇರಲಿಲ್ಲ ಎಂದೂ ಸಹ ಸರ್ಕಾರವು ತಿಳಿಸಿತು.

ಲಭ್ಯವಿರುವ ಹಣದಲ್ಲಿ ಶೇಕಡಾ 75ರಷ್ಟನ್ನು ಮಂಡಳಿಯು ಬಳಸಿರಲಿಲ್ಲವಾದ ಕಾರಣ 2017–18 ಮತ್ತು 2019–20ರ ಅವಧಿಯಲ್ಲಿ ನಾಲ್ಕನೇ ತ್ರೈಮಾಸಿಕ ಹಣವನ್ನು ಬಿಡುಗಡೆ ಮಾಡಿರಲಿಲ್ಲವಾದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

### *5.2.3 ಹಣದ ಬಳಕೆ*

ಹಣಕಾಸು ವರ್ಷದಲ್ಲಿ ವೆಚ್ಚ ಮಾಡದೆ ಉಳಿದಿರುವ ಹಣವು ರದ್ದಾಗುವುದಿಲ್ಲ ಮತ್ತು ಅಂತಹ ಬಾಕಿ ಮೊತ್ತವನ್ನು ಮುಂದಿನ ಹಣಕಾಸು ವರ್ಷಕ್ಕೆ ಮುಂದುವರೆಸಬಹುದು ಎಂದು ಹೈದರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಆದೇಶ, 2013ರ ಷರತ್ತು 16 (ಸಿ) ನಿಗದಿಪಡಿಸುತ್ತದೆ. ಹಾಗೆ ಒಂದು ವರ್ಷದಿಂದ ಇನ್ನೊಂದು ವರ್ಷಕ್ಕೆ ಮುಂದುವರೆಸಿದ ಹಣವು ಅಂತಹ ಹಣಕಾಸು ವರ್ಷದಲ್ಲಿ ಮೀಸಲಿಟ್ಟ ನಿಧಿಯ ಶೇಕಡಾ 20ರಷ್ಟನ್ನು ಮೀರುವಂತಿಲ್ಲ.

ಕೆಳಗಿನ **ಕೋಷ್ಟಕ–5.2**ರಲ್ಲಿ ತೋರಿಸಿರುವಂತೆ ಮಂಡಳಿ ಆದೇಶ, 2013ರಲ್ಲಿ ನಿಗದಿಪಡಿಸಿದ ಮಿತಿಯನ್ನು ಮೀರಿ ಮಂಡಳಿಯು ವೆಚ್ಚ ಮಾಡದ ಮೊತ್ತವನ್ನು ಉಳಿಸಿಕೊಂಡಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

**ಕೋಷ್ಟಕ–5.2: ಅಂತಿಮ ಶಿಲ್ಕಿನ ವಿವರಗಳು**

(₹ ಕೋಟಿಗಳಲ್ಲಿ)

| ವರ್ಷ | ಲಭ್ಯವಿದ್ದ ಒಟ್ಟು ಹಣ | ವೆಚ್ಚ | ಅಂತಿಮ ಶಿಲ್ಕು | ಶೇಕಡ 20ರ ಮಿತಿ |
|---|---|---|---|---|
| 2016–17 | 1,177.68 | 1,060.72 | 116.96 | 235.54 |
| 2017–18 | 1,026.93 | 740.46 | 286.47 | 205.39 |
| 2018–19 | 1,768.42 | 1,330.05 | 438.36 | 353.68 |
| 2019–20 | 1,585.06 | 1,245.24 | 339.82 | 317.01 |
| 2020–21 | 1,396.39 | 925.81 | 470.57 | 279.28 |

ಆಧಾರ: ಮಂಡಳಿಯು ಒದಗಿಸಿದ ಮಾಹಿತಿ

ಮಂಡಳಿಯು 2016–17ರ ಅವಧಿಯನ್ನು ಹೊರತುಪಡಿಸಿ ಬೇರೆ ಎಲ್ಲಾ ವರ್ಷಗಳಲ್ಲಿ ಅನುಮತಿಸಿದ್ದ ಮಿತಿಯಾದ ಶೇಕಡಾ 20ಕ್ಕೆ ಪ್ರತಿಯಾಗಿ ಹೆಚ್ಚಿನ ಹಣವನ್ನು ಶೇಕಡಾ 20 ಉಳಿಸಿಕೊಂಡಿರುವುದನ್ನು ಮೇಲಿನ ಕೋಷ್ಟಕದಿಂದ ಗಮನಿಸಬಹುದು. ಅಂತಹ ನಿರಂತರ ಉಳಿತಾಯಗಳು ವಾರ್ಷಿಕ ಕಾರ್ಯ ಯೋಜನೆಯಲ್ಲಿ ಅನುಮೋದಿಸಲಾದ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸದಿರುವಲ್ಲಿ ಪರಿಣಮಿಸುತ್ತದೆ.

### *5.2.4 ಕೆಳಸ್ತರದ ಹಣದ ಬಳಕೆ*

ಸಿಸಿಡಿಐ ಸೂಚ್ಯಂಕವನ್ನು ಆಧರಿಸಿ ತಾಲೂಕುಗಳಿಗೆ ಕೆಳಸ್ತರದ ನಿಧಿಗಳನ್ನು ಹಂಚಿಕೆ ಮಾಡಲಾಗುತ್ತದೆ. ಕೆಳಸ್ತರದ ನಿಧಿಗಳಡಿಯಲ್ಲಿ ತೆಗೆದುಕೊಳ್ಳಲಾದ ಕಾಮಗಾರಿಗಳು ಆಯಾ ತಾಲೂಕಿನ ಸಾಮಾಜಿಕ–ಆರ್ಥಿಕ ಸ್ಥಿತಿಯನ್ನು ಸುಧಾರಿಸುವಲ್ಲಿ ನೇರ ಪರಿಣಾಮ ಬೀರುತ್ತವೆ. ಕೆಳಸ್ತರದ ವರ್ಗದಡಿಯಲ್ಲಿ ನಿಧಿಗಳ ವೆಚ್ಚವನ್ನು (ಮಾರ್ಚ್ 2022 ರಂತೆ) **ಕೋಷ್ಟಕ–5.3**ರಲ್ಲಿ ತೋರಿಸಲಾಗಿದೆ

**ಕೋಷ್ಟಕ–5.3: ಕೆಳಸ್ತರದ ಹಣದ ಅಡಿಯಲ್ಲಿ ವೆಚ್ಚದ ವಿವರಗಳು**

(₹ ಕೋಟಿಗಳಲ್ಲಿ)

| ವರ್ಷ | ಕಾಮಗಾರಿಗಳ ಸಂಖ್ಯೆ | ಹಂಚಿಕೆ | ವೆಚ್ಚ | ವೆಚ್ಚ (ಶೇಕಡಾವಾರು) |
|---|---|---|---|---|
| 2013–14 | 782 | 136.59 | 106.96 | 78.31 |
| 2014–15 | 2,217 | 582.80 | 423.93 | 72.74 |
| 2015–16 | 2,965 | 647.51 | 479.96 | 74.12 |
| 2016–17 | 2,428 | 488.43 | 373.07 | 76.38 |
| 2017–18 | 3,325 | 714.66 | 565.39 | 79.11 |
| 2018–19 | 3,224 | 637.63 | 521.46 | 81.78 |
| 2019–20 | 2,994 | 914.24 | 691.82 | 75.67 |
| 2020–21 | 1,729 | 685.39 | 265.63 | 38.76 |
| 2021–22 | 1,836 | 882.97 | 80.50 | 9.12 |


ಆಧಾರ: ಮಂಡಳಿಯು ಒದಗಿಸಿದ ಹೈಕಾಸಾಫ್ಟ್ ದತ್ತಾಂಶ

2018–19ರ ಅವಧಿಯನ್ನು ಹೊರತುಪಡಿಸಿ ಎಲ್ಲಾ ವರ್ಷಗಳಲ್ಲಿ ಕೆಳಸ್ತರದ ನಿಧಿಗಳಡಿಯಲ್ಲಿನ ವೆಚ್ಚವು ಶೇಕಡಾ 80ಕ್ಕಿಂತ ಕಡಿಮೆಯಿರುವುದನ್ನು ಮೇಲಿನ ಕೋಷ್ಟಕದಿಂದ ಗಮನಿಸಬಹುದು.

2019–20ರವರೆಗಿನ ಪ್ರತಿ ತಾಲ್ಲೂಕಿನಲ್ಲಿನ ಕೆಳಸ್ತರದ ನಿಧಿಗಳ ವೆಚ್ಚವನ್ನು ಲೆಕ್ಕಪರಿಶೋಧನೆಯು ವಿಶ್ಲೇಷಿಸಿತು. ಜೇವರ್ಗಿ, ರಾಯಚೂರು, ಮಾನ್ವಿ, ಲಿಂಗಸೂಗೂರು ಈ ನಾಲ್ಕು ತಾಲ್ಲೂಕುಗಳು ಶೇಕಡಾ 70ಕ್ಕಿಂತ ಕಡಿಮೆ ವೆಚ್ಚ ಮಾಡುತ್ತಿದ್ದು, 19 ತಾಲೂಕುಗಳು ಶೇಕಡಾ 70ರಿಂದ 80ರಷ್ಟು ಹಣವನ್ನು ವೆಚ್ಚ ಮಾಡುತ್ತಿರುವುದನ್ನು ಗಮನಿಸಲಾಯಿತು. ತಾಲೂಕುಗಳ ವೆಚ್ಚದ ಶೇಕಡಾವಾರನ್ನು **ಅನುಬಂಧ–5.1**ರಲ್ಲಿ ನೀಡಲಾಗಿದೆ.

ಒಟ್ಟು ವೆಚ್ಚವು ಶೇಕಡಾ 70ಕ್ಕಿಂತ ಕಡಿಮೆ ಇರುವ ಕನಿಷ್ಠ ನಾಲ್ಕು ತಾಲೂಕುಗಳ ವರ್ಷವಾರು ವೆಚ್ಚದ ಕೆಳಗಿನ **ನಕ್ಷೆ–5.1**ರಲ್ಲಿ ನೀಡಲಾಗಿದೆ.

**ನಕ್ಷೆ–5.1: ನಾಲ್ಕು ತಾಲ್ಲೂಕುಗಳಲ್ಲಿ ಕೆಳಸ್ತರದ ಹಣದ ವೆಚ್ಚದ ಶೇಕಡಾವಾರು ಮತ್ತು ಕಡಿಮೆ ಬಳಕೆಯ ಮಟ್ಟಗಳು**




ಆಧಾರ: ಮಂಡಳಿಯು ಒದಗಿಸಿದ ಹೈಕಾಸಾಫ್ಟ್ ದತ್ತಾಂಶ

ಈ ತಾಲ್ಲೂಕುಗಳಲ್ಲಿ ಕಡಿಮೆ ವೆಚ್ಚಕ್ಕೆ ಕಾರಣಗಳನ್ನು ಮಂಡಳಿಯು ವಿಶ್ಲೇಷಿಸಿರಲಿಲ್ಲ.

### 5.2.5 ಅನುಷ್ಠಾನ ಏಜೆನ್ಸಿಗಳು ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸದಿರುವುದು

ಬ್ಯಾಂಕ್ ಖಾತೆಗಳ ಮೇಲೆ ಗಳಿಸಿದ ಬಡ್ಡಿಯನ್ನು ಸೇರಿಸಿ ಮಂಡಳಿಯು ಪ್ರತಿ ವರ್ಷವೂ ರಾಜ್ಯ ಸರ್ಕಾರಕ್ಕೆ ಬಿಡುಗಡೆಗಳ ಪ್ರತಿಯಾಗಿ ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸಬೇಕಿತ್ತು. ಮಾರ್ಚ್ 2022ರ ಅಂತ್ಯಕ್ಕೆ ₹64.07 ಕೋಟಿ ಬಳಕೆ ಪ್ರಮಾಣಪತ್ರಗಳನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಲು ಬಾಕಿ ಉಳಿಸಿಕೊಂಡಿರುವುದನ್ನು ಮಂಡಳಿಯ ಹಣಕಾಸು ತ:ಖ್ತೆಗಳ ಪರಿಶೀಲನೆಯು ತಿಳಿಯಪಡಿಸಿತು.

ಎಲ್ಲಾ ಅನುಷ್ಠಾನ ಏಜೆನ್ಸಿಗಳಿಂದ ಬಳಕೆ ಪ್ರಮಾಣಪತ್ರಗಳನ್ನು ಸ್ವೀಕರಿಸಿದ ನಂತರ ಏಕೀಕೃತ ಬಳಕೆ ಪ್ರಮಾಣಪತ್ರವನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಮಂಡಳಿಯು ಉತ್ತರಿಸಿತು (ಜುಲೈ 2022). ಮಂಡಳಿಯ ಉತ್ತರವನ್ನು ಸರ್ಕಾರವೂ ದೃಢೀಕರಿಸಿದೆ.

### 5.2.6 ಅನುಷ್ಠಾನ ಏಜೆನ್ಸಿಗಳಿಗೆ ಬಿಡುಗಡೆಯಾದ ಹಣದ ಮೇಲಿನ ಬಡ್ಡಿಯ ಲೆಕ್ಕ ಇಡದಿರುವಿಕೆ/ ಮರುಪಾವತಿ

ಮಂಡಳಿಯ ವಾರ್ಷಿಕ ಕಾರ್ಯಯೋಜನೆಗಳಲ್ಲಿ ಪ್ರಸ್ತಾವಿಸಲಾದ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತಗೊಳಿಸಲು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ, ಸರ್ವಶಿಕ್ಷಣ ಅಭಿಯಾನ, ನಿರ್ಮಿತಿ ಕೇಂದ್ರ, ಲೋಕೋಪಯೋಗಿ ಇಲಾಖೆ, ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗಗಳು, ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ, ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಹಾಗೂ ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ ಮುಂತಾದ ವಿವಿಧ ಅನುಷ್ಠಾನ ಪ್ರಾಧಿಕಾರಗಳಿಗೆ ಮುಂಗಡ ಪಾವತಿಯಾಗಿ ಮಂಡಳಿಯು ಹಣವನ್ನು ಬಿಡುಗಡೆ ಮಾಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದಾಗ್ಯೂ, ಅನುಷ್ಠಾನಗೊಳಿಸುವ ಏಜೆನ್ಸಿಗಳು ಆ ಹಣವನ್ನು ಪ್ರತ್ಯೇಕ ಬ್ಯಾಂಕ್ ಖಾತೆಯಲ್ಲಿ ನಿರ್ವಹಿಸಲು ಮಂಡಳಿಯು ಒತ್ತಾಯಿಸಲಿಲ್ಲ ಅಥವಾ ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿ ವಿಳಂಬವಾದಲ್ಲಿ ಮಂಡಳಿಯ ನಿಧಿಯಲ್ಲಿ ಗಳಿಸಿದ ಬಡ್ಡಿಯ ಮರುಪಾವತಿಗೆ ಷರತ್ತು ಸೇರಿಸಲಿಲ್ಲ.

ಈ ಏಜೆನ್ಸಿಗಳಿಗೆ ವಹಿಸಲಾದ ಹೆಚ್ಚಿನ ಸಂಖ್ಯೆಯ ಕಾಮಗಾರಿಗಳು ವಿವಿಧ ಕಾರಣಗಳಿಂದಾಗಿ ಅಸಾಮಾನ್ಯವಾಗಿ ವಿಳಂಬವಾಗಿ, ಅಂತಹ ವಿಳಂಬಿತ ಕಾಮಗಾರಿಗಳ ಪ್ರತಿಯಾಗಿ ಬಿಡುಗಡೆಯಾದ ಹಣವನ್ನು ದೀರ್ಘಕಾಲದವರೆಗೆ ವೆಚ್ಚ ಮಾಡದೇ ಅನುಷ್ಠಾನಗೊಳಿಸುವ ಏಜೆನ್ಸಿಗಳು ತಮ್ಮಲ್ಲಿಯೇ ಉಳಿಸಿಕೊಂಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಬಡ್ಡಿಯ ಮರುಪಾವತಿಗೆ ಸೂಕ್ತವಾದ ಷರತ್ತಿನ ಅನುಪಸ್ಥಿತಿಯಲ್ಲಿ ಅನುಷ್ಠಾನಗೊಳಿಸುವ ಏಜೆನ್ಸಿಗಳು ತಮ್ಮ ಖಾತೆಗಳಲ್ಲಿ ಗಳಿಸಿದ ಬಡ್ಡಿಯನ್ನು ತಾವೇ ಬಳಸಿಕೊಂಡಿದ್ದವು. ಮಂಡಳಿಯ ಈ ವಿಫಲತೆಯು ಅನುಷ್ಠಾನ ಏಜೆನ್ಸಿಗಳಿಗೆ ಅನಪೇಕ್ಷಿತ ಲಾಭವಾಗುವಲ್ಲಿ ಪರಿಣಮಿಸಿತು.

***ನಿದರ್ಶನ***

*ಟಿಎಲ್‌ಪಿ ಅನುಷ್ಠಾನಕ್ಕೆ ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ (ಎಸ್‌ಎಸ್‌ಎ), ಬೆಂಗಳೂರು ಇವರಿಗೆ ಮಂಡಳಿಯು ₹49.28 ಕೋಟಿ ಬಿಡುಗಡೆ (ಮಾರ್ಚ್ 2019 ಮತ್ತು ಜನವರಿ 2020) ಮಾಡಿತು. ಎಸ್‌ಎಸ್‌ಎ ಕಾರ್ಯಕ್ರಮದ ಅನುಷ್ಠಾನವನ್ನು ವಿಳಂಬಗೊಳಿಸಿದ್ದರಿಂದ ಹಣವು ಅದರ ಬ್ಯಾಂಕ್ ಖಾತೆಯಲ್ಲಿ ದೀರ್ಘಕಾಲ ಉಳಿಯಿತು ಮತ್ತು ವೆಚ್ಚ ಮಾಡದ ಹಣದ ಮೇಲೆ ಬಡ್ಡಿಯ ಗಳಿಕೆಯಾಗುತ್ತಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.*

*ಆದಾಗ್ಯೂ, ನಿರ್ದೇಶಕರು, ಎಸ್‌ಎಸ್‌ಎ ಗಳಿಸಿದ ಬಡ್ಡಿಯನ್ನು ಮಂಡಳಿಗೆ ಹಿಂತಿರುಗಿಸಲಿಲ್ಲ. ಲೆಕ್ಕಪರಿಶೋಧನೆಯು ವಾರ್ಷಿಕವಾಗಿ ಶೇಕಡಾ 3ರಷ್ಟು ಅತ್ಯಲ್ಪ ಬಡ್ಡಿದರವನ್ನು ಅಳವಡಿಸಿಕೊಂಡು ಲೆಕ್ಕ ಹಾಕಿದಂತೆ ಎಸ್‌ಎಸ್‌ಎ ₹1.55 ಕೋಟಿ ಬಡ್ಡಿಯನ್ನು ಗಳಿಸಿತ್ತು* ***(ಅನುಬಂಧ–5.2)***

ಅನುಷ್ಠಾನ ಸಂಸ್ಥೆಗಳಿಗೆ ಹಣದ ಬಿಡುಗಡೆಯ ಸಮಗ್ರ ವಿವರಗಳ ಅನುಪಸ್ಥಿತಿಯಲ್ಲಿ, ಲೆಕ್ಕಪರಿಶೋಧನೆಯು ಬಡ್ಡಿ ಮೊತ್ತದ ನಿಖರವಾದ ನಷ್ಟವನ್ನು ಲೆಕ್ಕ ಹಾಕಲು ಸಾಧ್ಯವಾಗಲಿಲ್ಲ.

***ನಿದರ್ಶನ***

*(1) ಹಾಸ್ಟೆಲ್‌ಗಳ ನಿರ್ಮಾಣಕ್ಕಾಗಿ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು ಇವರಿಗೆ ಮಂಡಳಿಯು ₹35.96 ಕೋಟಿ ಬಿಡುಗಡೆ ಮಾಡಿತು (2021). ಆದರೆ ನಿರ್ಮಾಣದ ನಿಧಾನಗತಿಯ ಕಾರಣದಿಂದ ₹29.99 ಕೋಟಿ ಮೊತ್ತದ ಹಣವು ವೆಚ್ಚವಾಗದೇ ಮಂಡಳಿಯ ಖಾತೆಯಲ್ಲಿ ಉಳಿದು ಬಡ್ಡಿಯನ್ನು ಗಳಿಸಿ ಕಲ್ಯಾಣ–ಕರ್ನಾಟಕ ಮಂಡಳಿಗೆ ಹಿಂತಿರುಗಿಸಿರಲಿಲ್ಲ.*

*(2) ಮಂಡಳಿಯು ಮೂರನೇ ವ್ಯಕ್ತಿಯಿಂದ ನಡೆಸುವ ತಪಾಸಣಾ ಶುಲ್ಕವನ್ನು ತಡೆಹಿಡಿದು ಕೆಆರ್‌ಐಡಿಎಲ್‌ಗೆ ವಹಿಸಲಾದ ಕಾಮಗಾರಿಗಳ ಅಂದಾಜು ವೆಚ್ಚದ ಶೇಕಡಾ 99 ರಷ್ಟನ್ನು ಬಿಡುಗಡೆ ಮಾಡುತ್ತಿತ್ತು. 2013–14ರಿಂದ 2021–22ರ ಅವಧಿಯಲ್ಲಿ ಕಲಬುರಗಿಯ ಕೆಆರ್‌ಐಡಿಎಲ್–I ಗೆ ₹104.56 ಕೋಟಿ ಅಂದಾಜು ವೆಚ್ಚದಲ್ಲಿ 486 ಕಾಮಗಾರಿಗಳನ್ನು ಮತ್ತು ಕೆಆರ್‌ಐಡಿಎಲ್–II ಕಲಬುರಗಿಗೆ ₹163.20 ಕೋಟಿ ಅಂದಾಜು ವೆಚ್ಚದಲ್ಲಿ 841 ಕಾಮಗಾರಿಗಳನ್ನು ವಹಿಸಲಾಗಿತ್ತು ಹಾಗೂ ₹146.26 ಕೋಟಿ ಬಿಡುಗಡೆ ಮಾಡಲಾಗಿತ್ತು, 638 ಕಾಮಗಾರಿಗಳನ್ನು ಕೆಆರ್‌ಐಡಿಎಲ್ ರಾಯಚೂರಿಗೆ ವಹಿಸಿ ₹258.65 ಕೋಟಿ ಬಿಡುಗಡೆ ಮಾಡಲಾಗಿತ್ತು. ಫೆಬ್ರವರಿ 2022ರ ವೇಳೆಗೆ ₹1.44 ಕೋಟಿ (ರಾಯಚೂರು ₹0.52 ಕೋಟಿ ಮತ್ತು ಕಲಬುರಗಿ ₹0.92 ಕೋಟಿ) ವೆಚ್ಚ ಮಾಡದೇ ಬಾಕಿ ಉಳಿದಿರುವ ಏಜೆನ್ಸಿಯ ಖಾತೆಯಲ್ಲಿ ಜಮೆಗೊಂಡಿರುವುದು ಪರೀಕ್ಷಾ–ತನಿಖೆ ನಡೆಸಿದ ಕಾಮಗಾರಿಗಳ ಪರಿಶೀಲನೆಯ ಸಮಯದಲ್ಲಿ ಗಮನಕ್ಕೆ ಬಂದಿದ್ದು, ಅದನ್ನು ಇತರ ಹಣದೊಂದಿಗೆ ಒಂದು ಖಾತೆಯಲ್ಲಿ ಜಮೆ ಮಾಡಲಾಗಿದೆ. ಈ ಹಣದ ಮೇಲೆ ಗಳಿಸಿದ ಬಡ್ಡಿಯನ್ನು ಮಂಡಳಿಗೆ ಹಿಂತಿರುಗಿಸಿರಲಿಲ್ಲ.*

*(3) ಕಲಬುರಗಿಯಲ್ಲಿ ಉದ್ದೇಶಿತ 300 ಹಾಸಿಗೆಗಳ ಎಸ್‌ಜೆಐಸಿಆರ್ ಆಸ್ಪತ್ರೆ ನಿರ್ಮಾಣಕ್ಕಾಗಿ ಮಂಡಳಿಯು 2019–20ರಲ್ಲಿ ₹33.37 ಕೋಟಿ ಮತ್ತು 2020–21ರಲ್ಲಿ ₹62.63 ಕೋಟಿಯನ್ನು ಬೆಂಗಳೂರಿನ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ಬಿಡುಗಡೆ ಮಾಡಿತ್ತು. ಮಾರ್ಚ್ 2021 ರಲ್ಲಿದ್ದಂತೆ ಹೃದ್ರೋಗ ಬ್ಯಾಂಕ್ ಖಾತೆಯಲ್ಲಿ ₹60.62 ಕೋಟಿ (₹55.05 ಕೋಟಿ ಸಾಮಾನ್ಯ ಮತ್ತು ₹5.57 ಕೋಟಿ ಎಸ್‌ಸಿಪಿ) ಬಾಕಿ ಉಳಿದಿತ್ತು. ಗಳಿಸಿದ ಬಡ್ಡಿಯನ್ನು ಮಂಡಳಿಗೆ ಹಿಂತಿರುಗಿಸಿರಲಿಲ್ಲ.*

ಮಂಡಳಿಯ ಅನುದಾನದ ಮೇಲೆ ಗಳಿಸಲಾದ ಬ್ಯಾಂಕ್ ಬಡ್ಡಿಯನ್ನು ಮರುಪಾವತಿಸಲು ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ (ಎಸ್‌ಎಸ್‌ಎ), ಬೆಂಗಳೂರು ಇವರನ್ನು ವಿನಂತಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಜುಲೈ 2022). ಈ ವಿಷಯವನ್ನು ನಿರಂತರವಾಗಿ ಗಮನಿಸುವ ಮೂಲಕ ಏಜೆನ್ಸಿಗಳಿಂದ ಬಡ್ಡಿಯನ್ನು ಮರಳಿ ಪಡೆಯಲು ಕ್ರಮ ಕೈಗೊಳ್ಳಲಾಗುವುದು ಎಂದೂ ಸಹ ತಿಳಿಸಲಾಯಿತು.

ಆದಾಗ್ಯೂ, ಕಾಲಕಾಲಕ್ಕೆ ತನ್ನ ನಿಧಿಯ ಮೇಲೆ ಇತರ ಅನುಷ್ಠಾನ ಏಜೆನ್ಸಿಗಳು ಗಳಿಸಿದ ಬಡ್ಡಿಯನ್ನು ಗಮನಿಸಲು, ಲೆಕ್ಕಹಾಕಲು ಮತ್ತು ತಿಳಿದುಕೊಳ್ಳಲು ಮಂಡಳಿಯು ತೆಗೆದುಕೊಂಡ ಕ್ರಮಗಳ ಬಗ್ಗೆ ಏನೂ ತಿಳಿಸಲಾಗಿಲ್ಲ.

### *5.2.7 ಸರ್ಕಾರೀ ಹಣದ ಮೇಲೆ ಗಳಿಸಿದ ಬಡ್ಡಿಯ ಬಳಕೆ*

ಕಾರ್ಯ ಯೋಜನೆಯ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಬಡ್ಡಿ ಮೊತ್ತವನ್ನು ಬಳಸಿಕೊಳ್ಳಲು ಸರ್ಕಾರವು ಮಂಡಳಿಗೆ ಅನುಮತಿ ನೀಡಿತು. 2016–17ರಿಂದ 2020–21ರ ಅವಧಿಯಲ್ಲಿ ₹107.86 ಕೋಟಿ ಬಡ್ಡಿ ಗಳಿಸಲಾಗಿತ್ತು. ಆದಾಗ್ಯೂ, ಮಂಡಳಿಯು ಈ ಬಡ್ಡಿ ಮೊತ್ತದ ಬಳಕೆಗಾಗಿ ಯಾವುದೇ ಕಾರ್ಯ ಯೋಜನೆಯನ್ನು ಸಿದ್ಧಪಡಿಸಿರಲಿಲ್ಲವಾಗಿ ಬಡ್ಡಿಯ ಮೊತ್ತವು ಬಳಕೆಯಾಗದೇ ಉಳಿದಿತ್ತು.

### *5.2.8 ಆದಾಯ ತೆರಿಗೆ ಇಲಾಖೆಯಿಂದ ಮರುಪಾವತಿಯನ್ನು ಕ್ಲೈಮ್ ಮಾಡದಿರುವುದರಿಂದ ಆದ ನಷ್ಟ*

ಆದಾಯ ತೆರಿಗೆ ಕಾಯಿದೆ, 1961ರ ಸೆಕ್ಷನ್ 10(46)ರ ಪ್ರಕಾರ ಕೇಂದ್ರ, ರಾಜ್ಯ ಅಥವಾ ಪ್ರಾಂತೀಯ ಕಾಯಿದೆಯ ಮೂಲಕ ಅಥವಾ ಅದರ ಅಡಿಯಲ್ಲಿ ಸ್ಥಾಪಿಸಲಾದ ಅಥವಾ ರಚಿಸಲಾದ ಯಾವುದೇ ಅಧಿಸೂಚಿತ ಸಂಸ್ಥೆ/ಅಧಿಕಾರ/ಮಂಡಳಿ/ಟ್ರಸ್ಟ್/ಆಯೋಗಕ್ಕೆ ಬರುವ ಆದಾಯಕ್ಕೆ ಸಾರ್ವಜನಿಕರ ಅನುಕೂಲಕ್ಕಾಗಿ ಯಾವುದೇ ಚಟುವಟಿಕೆಯನ್ನು ನಿಯಂತ್ರಿಸುವ ಅಥವಾ ನಿರ್ವಹಿಸುವ ಉದ್ದೇಶವನ್ನು ಹೊಂದಿರುವ ಸರ್ಕಾರ ಅಥವಾ ರಾಜ್ಯ ಸರ್ಕಾರ ಮತ್ತು ಯಾವುದೇ ವಾಣಿಜ್ಯ ಚಟುವಟಿಕೆಯಲ್ಲಿ ತೊಡಗಿಲ್ಲ ಮತ್ತು ಈ ಷರತ್ತಿನ ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರವು ಅಧಿಕೃತ ಗೆಜೆಟ್‌ನಲ್ಲಿ ತಿಳಿಸಲಾಗಿದ್ದರೆ ತೆರಿಗೆ ವಿನಾಯಿತಿ ಇರುತ್ತದೆ. ಇದಲ್ಲದೆ, ಸೆಂಟ್ರಲ್ ಬೋರ್ಡ್ ಆಫ್ ಡೈರೆಕ್ಟ್ ಟ್ಯಾಕ್ಸ್‌ನ ಜುಲೈ 16, 2002ರ ಸುತ್ತೋಲೆ ನಂ.4 ಸೆಕ್ಷನ್ 10(20)ರ ವಿವರಣೆಯ ಅಡಿಯಲ್ಲಿ ಬರುವ ಸ್ಥಳೀಯ ಅಧಿಕಾರಿಗಳು ಮೂಲದಲ್ಲಿ ತೆರಿಗೆ ಕಡಿತದಿಂದ (ಟಿಡಿಎಸ್) ವಿನಾಯಿತಿ ಪಡೆಯುತ್ತಾರೆ ಎಂದು ಸ್ಪಷ್ಟಪಡಿಸುತ್ತದೆ.

**ಕೋಷ್ಟಕ–5.4ರಲ್ಲಿ** ವಿವರಿಸಿದಂತೆ ಬ್ಯಾಂಕ್ ₹4.39 ಕೋಟಿಗಳಷ್ಟು ತೆರಿಗೆಯನ್ನು ಮೂಲದಲ್ಲಿ ಕಡಿತ ಗೊಳಿಸಿರುವುದನ್ನು ಗಮನಿಸಲಾಯಿತು.

**ಕೋಷ್ಟಕ–5.4: ಮೂಲದಲ್ಲಿ ತೆರಿಗೆ ಕಡಿತ ಮಾಡಿರುವುದು**

| ಹಣ | ವರ್ಷ | ಬ್ಯಾಂಕ್ ಖಾತೆ | ಟಿಡಿಎಸ್ ಮೊತ್ತ (₹ ಕೋಟಿಗಳಲ್ಲಿ) |
|---|---|---|---|
| ಸಾಮಾನ್ಯ | 2018–19 ರಿಂದ 2020–21 | 37130780690 | 3.77 |
| ಎಸ್‌ಸಿಪಿ | 2018–19 | 37130944640 | 0.40 |
| ಟಿಎಸ್‌ಪಿ | 2018–19 | 37130974346 | 0.22 |
| **ಒಟ್ಟು** | | | **4.39** |

ಆಧಾರ: ಮಂಡಳಿಯು ಒದಗಿಸಿದ ಮಾಹಿತಿ

ಆದಾಗ್ಯೂ, ಮಂಡಳಿಯು ಸಂಹಿತೆಯ ನಿಬಂಧನೆಗಳನ್ನು ಉಲ್ಲೇಖಿಸಿ ತೆರಿಗೆಯನ್ನು ಮರುಜಮೆ ಮಾಡಲು ಬ್ಯಾಂಕ್‌ನೊಂದಿಗೆ ಈ ವಿಷಯವನ್ನು ಚರ್ಚಿಸಲಿಲ್ಲ ಅಥವಾ ಆದಾಯ ತೆರಿಗೆ ಇಲಾಖೆಯಿಂದ (ಅಕ್ಟೋಬರ್ 2021) ಮೂಲದಲ್ಲಿ ಕಡಿತ ಮಾಡಿದ ಮೊತ್ತದ ಮರುಪಾವತಿಯನ್ನು ಕ್ಲೈಮ್ ಮಾಡಲು ಕ್ರಮವನ್ನು ಪ್ರಾರಂಭಿಸಲಿಲ್ಲ. ಹೀಗೆ, ಮಂಡಳಿಯ ನಿಷ್ಕ್ರಿಯತೆಯು ₹4.39 ಕೋಟಿ ನಷ್ಟ ತಪ್ಪಿಸಬಹುದಾಗಿದ್ದ ನಷ್ಟದಲ್ಲಿ ಪರಿಣಮಿಸಿತು.

ಮರುಪಾವತಿಗಾಗಿ ಸೆಕ್ಷನ್ 10 (46) ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆ (ಡಿಸೆಂಬರ್ 2021) ಮತ್ತು ಆದಾಯ ತೆರಿಗೆ ಅಧಿಕಾರಿಗಳಿಂದ ವಿನಾಯಿತಿಯನ್ನು ನಿರೀಕ್ಷಿಸಲಾಗುತ್ತಿದೆ ಎಂದು ಸರ್ಕಾರವು ತಿಳಿಸಿತು (ಜುಲೈ 2022).

### *5.2.9 ಗುತ್ತಿಗೆದಾರರಿಗೆ ಕ್ಲೈಮ್‌ಗಳನ್ನು ಇತ್ಯರ್ಥ ಮಾಡುವಲ್ಲಿ ವಿಳಂಬ*

ಕರ್ನಾಟಕ ಲೋಕೋಪಯೋಗಿ ಇಲಾಖೆ (ಕೆಪಿಡಬ್ಲ್ಯೂಡಿ) ಸಂಹಿತೆಯಲ್ಲಿ (ನಿಯಮ 202) ನಿಗದಿಪಡಿಸಿರುವಂತೆ ಒಂದು ತಿಂಗಳಲ್ಲಿ ಮಾಡಿದ ಮತ್ತು ಅಳತೆ ಮಾಡಿದ ಕಾಮಗಾರಿಗೆ ಸಾಮಾನ್ಯವಾಗಿ ಮುಂದಿನ ತಿಂಗಳಿನಲ್ಲಿ ಪಾವತಿ ಮಾಡಲಾಗುತ್ತದೆ. ಸಕಾಲದಲ್ಲಿ ಮಾಡುವ ಪಾವತಿಯು ಕಾಮಗಾರಿಯ ಗುಣಮಟ್ಟವನ್ನು ಹೆಚ್ಚಿಸುತ್ತದೆ ಮತ್ತು ಸರ್ಕಾರದ ಅಭಿವೃದ್ಧಿ ಚಟುವಟಿಕೆಗಳ ಪರಿಣಾಮಕಾರಿತ್ವವನ್ನು ಪ್ರದರ್ಶಿಸುತ್ತದೆ ಎಂದು ಸಹ ಹೇಳಲಾಗಿದೆ.

ಗುತ್ತಿಗೆದಾರರು/ಪೂರೈಕೆದಾರರ ಬಿಲ್‌ಗಳ ಇತ್ಯರ್ಥದಲ್ಲಿ ವಿಳಂಬವಾಗಿರುವುದನ್ನು 2016–21ರ ಅವಧಿಯಲ್ಲಿ ಮಂಡಳಿಯು ಪಾವತಿಸಿದ 23,772 ಬಿಲ್‌ಗಳ ಪರೀಕ್ಷಾ–ತನಿಖೆಯಲ್ಲಿ ಗಮನಿಸಲಾಯಿತು. ಗುತ್ತಿಗೆದಾರರ ಹಕ್ಕುಗಳ ಇತ್ಯರ್ಥಕ್ಕೆ ತೆಗೆದುಕೊಂಡ ಸಮಯದ ವಿವರಗಳನ್ನು **ಕೋಷ್ಟಕ–5.5**ರಲ್ಲಿ ನೀಡಲಾಗಿದೆ.

**ಕೋಷ್ಟಕ–5.5: ಗುತ್ತಿಗೆದಾರರಿಗೆ ಕ್ಲೈಮ್‌ಗಳನ್ನು ಇತ್ಯರ್ಥ ಮಾಡುವುದಕ್ಕೆ ತೆಗೆದುಕೊಂಡ ಸಮಯ**

| ವಿಳಂಬ | ಬಿಲ್ಲುಗಳ ಸಂಖ್ಯೆ | ಬಿಲ್ಲುಗಳ ಶೇಕಡಾವಾರು | ಮೊತ್ತ (₹ ಕೋಟಿಗಳಲ್ಲಿ) |
|---|---|---|---|
| 0–15 ದಿನಗಳು | 9196 | 38 | 1,022.72 |
| 16–30 ದಿನಗಳು | 4652 | 20 | 623.57 |
| 31–60 ದಿನಗಳು | 4407 | 19 | 443.87 |
| 61–90 ದಿನಗಳು | 1849 | 8 | 156.43 |
| 91–180 ದಿನಗಳು | 2248 | 9 | 164.17 |
| 181–365 ದಿನಗಳು | 1081 | 5 | 61.81 |
| 366–730 ದಿನಗಳು | 322 | 1 | 11.06 |
| ಎರಡು ವರ್ಷಗಳಿಗೂ ಮೇಲ್ಪಟ್ಟು | 17 | | 0.37 |

ಆಧಾರ: ಕೆಕೆಆರ್‌ಡಿಬಿ ಒದಗಿಸಿದ ಹೈಕೋಸಾಫ್ಟ್ ದತ್ತಸಂಚಯ

ಮಂಡಳಿಗೆ ಸಲ್ಲಿಸಲಾದ ಶೇಕಡಾ 58ರಷ್ಟು ಕ್ಲೇಮ್‌ಗಳನ್ನು ನಿಗದಿತ ಅವಧಿಯೊಳಗೆ ಇತ್ಯರ್ಥಗೊಳಿಸಿರುವುದನ್ನು ಮತ್ತು ಉಳಿದ ಶೇಕಡಾ 42ರಷ್ಟು ಬಿಲ್‌ಗಳಿಗೆ ಸಂಬಂಧಿಸಿದಂತೆ ವಿಳಂಬವಾಗಿರುವುದನ್ನು ಮೇಲಿನ ಕೋಷ್ಟಕದಿಂದ ಗಮನಿಸಬಹುದು. 17 ಬಿಲ್‌ಗಳಿಗೆ ಸಂಬಂಧಿಸಿದಂತೆ, ಎರಡು ವರ್ಷಕ್ಕಿಂತ ಹೆಚ್ಚು ವಿಳಂಬವಾಗಿದ್ದವು ಮತ್ತು 322 ಬಿಲ್‌ಗಳು ಒಂದು ವರ್ಷಕ್ಕಿಂತ ಹೆಚ್ಚು ವಿಳಂಬವಾಗಿದ್ದವು. ಬಿಲ್‌ಗಳ ಇತ್ಯರ್ಥದಲ್ಲಿನ ವಿಳಂಬವು ಉತ್ತಮ ಅಭ್ಯಾಸವಲ್ಲ ಎಂದು ಕೇಂದ್ರ ಜಾಗೃತ ಆಯೋಗದ ಅವಲೋಕನಗಳನ್ನು ಉಲ್ಲೇಖಿಸುವುದು ಇಲ್ಲಿ ಸೂಕ್ತವಾಗುತ್ತದೆ. ಕ್ಲೈಮ್‌ಗಳ ಇತ್ಯರ್ಥದಲ್ಲಿ ವಿಳಂಬಕ್ಕೆ ಕಾರಣಗಳನ್ನು ಮಂಡಳಿಯು ವಿವರಿಸಲಿಲ್ಲ.

ಹೈಕಾಸಾಫ್ಟ್ ಅಪ್ಲಿಕೇಶನ್ ಬಳಸಿ ರನ್ನಿಂಗ್ ಅಕೌಂಟ್/ ಭಾಗಶ: ಬಿಲ್‌ಗಳನ್ನು 3–4 ದಿನಗಳಲ್ಲಿ ಮತ್ತು ಅಂತಿಮ ಬಿಲ್‌ಗಳನ್ನು 5–7 ದಿನಗಳಲ್ಲಿ ಇತ್ಯರ್ಥಗೊಳಿಸಲಾಗುತ್ತಿದೆ ಎಂದು ಸರ್ಕಾರವು ತಿಳಿಸಿತು (ಜುಲೈ 2022). ಪಾವತಿಗಳನ್ನು ನೆಫ್ಟ್/ಆರ್‌ಟಿಜಿಎಸ್ ಮೂಲಕ ಮಾಡಲಾಗುತ್ತದೆ ಮತ್ತು ಮಾರ್ಚ್ 2018ರಿಂದ 24 ಗಂಟೆಗಳೊಳಗೆ ಗುತ್ತಿಗೆದಾರರ ಖಾತೆಗೆ ಜಮಾ ಮಾಡಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಬಿಲ್‌ಗಳಲ್ಲಿನ ಯಾವುದೇ ತಾಂತ್ರಿಕ ದೋಷಗಳನ್ನು ಪರಿಶೀಲಿಸಿ ಮರುಸಲ್ಲಿಸಬೇಕಾಗುತ್ತದೆ.

ಹೈಕಾಸಾಫ್ಟ್ ಅಪ್ಲಿಕೇಶನ್‌ನಿಂದ ಪಡೆದ ದತ್ತಾಂಶವು ಬಿಲ್ಲುಗಳ ಇತ್ಯರ್ಥಪಡಿಸುವಿಕೆಯಲ್ಲಿ ವಿಳಂಬಗಳನ್ನು ತೋರಿಸಿದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

### *5.2.10 ನಿರ್ಮಿತಿ ಕೇಂದ್ರಕ್ಕೆ ಅಕ್ರಮ ಸರಬರಾಜುಗಳು*

ರಾಜ್ಯ ಸರ್ಕಾರದಿಂದ ಸ್ಥಾಪಿತವಾಗಿ ನೋಂದಾಯಿತ ಸೊಸೈಟಿಯಾದ ನಿರ್ಮಿತಿ ಕೇಂದ್ರವು ಕೆಟಿಪಿಪಿ ಕಾಯ್ದೆಯ 4(ಜಿ) ವಿನಾಯತಿಯಡಿಯಲ್ಲಿ ಅಥವಾ ಇತರ ಗುತ್ತಿಗೆದಾರರಾಗಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೂಲಕ ನೇರ ವಹಿಸುವಿಕೆಯ ಮೇಲೆ ಮಂಡಳಿಯ ಕಾಮಗಾರಿಗಳನ್ನು ನಿರ್ವಹಿಸುವ ಅನುಷ್ಠಾನ ಸಂಸ್ಥೆಯಾಗಿತ್ತು. ಆದ್ದರಿಂದ, ನಿರ್ಮಿತಿ ಕೇಂದ್ರವು ತನಗೆ ವಹಿಸಿಕೊಟ್ಟಿರುವ ಕಾಮಗಾರಿಗಳನ್ನು ನಿರ್ವಹಿಸಲು ಅಗತ್ಯವಿರುವ ಕಾರ್ಮಿಕರು, ಉಪಕರಣಗಳು ಮತ್ತು ಯಂತ್ರೋಪಕರಣಗಳನ್ನು ಸಜ್ಜುಗೊಳಿಸುವುದು ಕಡ್ಡಾಯವಾಗಿತ್ತು.

ಆದರೆ, ಮಂಡಳಿಯು ಒಟ್ಟು ₹65 ಲಕ್ಷ ವೆಚ್ಚದಲ್ಲಿ ವಿವಿಧ ಯಂತ್ರೋಪಕರಣಗಳು/ಉಪಕರಣಗಳನ್ನು[20] ಖರೀದಿಸಿ (2016–17 ಮತ್ತು 2017–18) ನಿರ್ಮಿತಿ ಕೇಂದ್ರಕ್ಕೆ ಹಂತ ಹಂತವಾಗಿ ಸರಬರಾಜು ಮಾಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ನಿರ್ಮಿತಿ ಕೇಂದ್ರಕ್ಕೆ ಸರಬರಾಜು ಮಾಡಲಾದ ಯಂತ್ರೋಪಕರಣಗಳ/ಸಲಕರಣೆಗಳ ಐಟಂ–ವಾರು ಪಟ್ಟಿಯನ್ನು **ಅನುಬಂಧ–5.3ರಲ್ಲಿ** ನೀಡಲಾಗಿದೆ.

[20] 2.0 ಘನಮೀಟರ್ ಎಸ್ ಬಾಕ್ಸ್ ಟಿಪ್ಪರ್ ಬಿಎಸ್4, ಗುಣಮಟ್ಟ ನಿಯಂತ್ರಣ ಸಾಧನ, ಸ್ಥಾವರದ ಒಟ್ಟು ಸಮೀಕ್ಷೆ ಸಾಧನ, ಮುಂತಾದವುಗಳು.

ನಿರ್ಮಿತಿ ಕೇಂದ್ರಗಳ ಮೂಲಸೌಕರ್ಯ ಮತ್ತು ತಂತ್ರಜ್ಞಾನ ಅಭಿವೃದ್ಧಿಯನ್ನು ಸಕ್ರಿಯಗೊಳಿಸಲು ಅವುಗಳ ಸಾಮರ್ಥ್ಯವನ್ನು ಸುಧಾರಿಸಲು ಪರಿಸರ ಸ್ನೇಹಿ, ವೆಚ್ಚದ ಪರಿಣಾಮಕಾರಿ ಮತ್ತು ನವೀನ ತಂತ್ರಜ್ಞಾನವನ್ನು ಸರ್ಕಾರಿ ಮೂಲಸೌಕರ್ಯಗಳ ನಿರ್ಮಾಣದಲ್ಲಿ ಸಾಧಿಸಲು ಅನುಕೂಲವಾಗುವಂತೆ ಏಜೆನ್ಸಿಗೆ ಸರಬರಾಜು ಮಾಡಲಾಯಿತು ಎಂದು ಸರ್ಕಾರವು ತಿಳಿಸಿತು (ಜುಲೈ 2022).

ನಿರ್ಮಿತಿ ಕೇಂದ್ರವು ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಮಾತ್ರ ಸೇವಾ ಶುಲ್ಕಗಳಿಗೆ ಅರ್ಹವಾಗಿರುವುದರಿಂದ ಮತ್ತು ಮಂಡಳಿಯ ನಿಧಿಯಿಂದ ನಿರ್ಮಿತಿ ಕೇಂದ್ರಕ್ಕೆ ಯಂತ್ರೋಪಕರಣಗಳು/ಉಪಕರಣಗಳನ್ನು ಒದಗಿಸಿರುವುದು ಅನಪೇಕ್ಷಿತ ಸ್ವರೂಪದ್ದಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

### *5.2.11 ಕೆಟಿಪಿಪಿ ಅಧಿನಿಯಮವನ್ನು ಉಲ್ಲಂಘಿಸಿ ಕೆಆರ್‌ಐಡಿಎಲ್‌ಗೆ ಹಣದ ಅಕ್ರಮ ಬಿಡುಗಡೆ*

ಕರ್ನಾಟಕ ಸರ್ಕಾರವು ಕೆಟಿಪಿಪಿ ಕಾಯಿದೆಯ ಸೆಕ್ಷನ್ 4(ಜಿ) ಅಡಿಯಲ್ಲಿ ಕೆಆರ್‌ಐಡಿಎಲ್‌ಗೆ ವಹಿಸಿಕೊಟ್ಟಿರುವ ಕಾಮಗಾರಿಗಳಿಗೆ ₹2.00 ಕೋಟಿವರೆಗೆ ವಿನಾಯಿತಿ ನೀಡಿತ್ತು (ಫೆಬ್ರವರಿ 2014). ಹೀಗೆ, ಕೆಆರ್‌ಐಡಿಎಲ್‌ಗೆ ₹2.00 ಕೋಟಿವರೆಗಿನ ಕಾಮಗಾರಿಗಳನ್ನು ಮಾತ್ರ ಕಾರ್ಯಗತಗೊಳಿಸಲು ಅಧಿಕಾರವಿದ್ದಿತು. ₹2.00 ಕೋಟಿಗಿಂತ ಹೆಚ್ಚಿನ ಕಾಮಗಾರಿಗಳಿಗೆ ಮಂಡಳಿಯು ಕೆಟಿಪಿಪಿ ಕಾಯ್ದೆಯ ನಿಬಂಧನೆಗಳನ್ನು ಅನುಸರಿಸಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮುಕ್ತ ಟೆಂಡರ್ಗಳನ್ನು ಆಹ್ವಾನಿಸಬೇಕಿತ್ತು.

ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಮುರ್ಕಿ ಗುಡ್ಡದಿಂದ ನರಬಂಡಾ ಹಾಗೂ ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ವಾಡಿಯಿಂದ ಬಲವಾಡಗಿ ಗ್ರಾಮದವರೆಗಿನ ರಸ್ತೆಗೆ ಮೆಟಲಿಂಗ್ ಸುಧಾರಣಾ ಕಾಮಗಾರಿಗೆ ₹4.97 ಕೋಟಿ ಅನುದಾನ ಬಿಡುಗಡೆ ಮಾಡಿರುವುದನ್ನು ರಾಯಚೂರು ಮತ್ತು ಕಲಬುರಗಿಯಲ್ಲಿ ಕೆಆರ್‌ಐಡಿಎಲ್‌ನಿಂದ ಕಾರ್ಯಗತಗೊಳಿಸಿದ ಎರಡು ಪರೀಕ್ಷಾ–ತನಿಖೆ ನಡೆಸಿದ ಕಾಮಗಾರಿಗಳ ಲೆಕ್ಕಪರಿಶೋಧನೆಯು ತಿಳಿಯಪಡಿಸಿತು.

ಕಾಮಗಾರಿಗಳ ಅಂದಾಜು ವೆಚ್ಚ ₹2.00 ಕೋಟಿ ವಿನಾಯಿತಿ ಮಿತಿಯನ್ನು ಮೀರಿರುವುದರಿಂದ ನೇರವಾಗಿ ಕಾಮಗಾರಿ ಕಾರ್ಯಗತಗೊಳಿಸಲು ಏಜೆನ್ಸಿಗೆ ಅಧಿಕಾರ ಇಲ್ಲದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹೀಗೆ, ಕೆಟಿಪಿಪಿ ಕಾಯ್ದೆಯ ನಿಬಂಧನೆಗಳನ್ನು ಉಲ್ಲಂಘಿಸಿ ಮಂಡಳಿಯು ಕೆಆರ್‌ಐಡಿಎಲ್‌ಗೆ ಹಣವನ್ನು ಬಿಡುಗಡೆ ಮಾಡಿತ್ತು.

### *5.2.12 ಯೋಜನಾ ಬೆಂಬಲ ಕಛೇರಿಗೆ ಅಕ್ರಮ ಪಾವತಿಗಳು*

ಮಂಡಳಿಯು ಜುಲೈ 2020ರಲ್ಲಿ ₹9.97 ಕೋಟಿ ಗುತ್ತಿಗೆ ಬೆಲೆಯಲ್ಲಿ ಯೋಜನಾ ಬೆಂಬಲ ಕಚೇರಿಯನ್ನು (ಪಿಎಸ್‌ಒ) ಸ್ಥಾಪಿಸಿತು. ಮಂಡಳಿಯು ನಡೆಸುತ್ತಿರುವ ಎಲ್ಲಾ ಚಟುವಟಿಕೆಗಳಿಗೆ ಬೆಂಬಲ ಸೇವೆಗಳನ್ನು ಒದಗಿಸುವುದು, ಅಂದರೆ, ಒಟ್ಟಾರೆ ಪರಿಶೀಲನೆ, ಮೇಲ್ವಿಚಾರಣೆ ಮತ್ತು ವಿತರಣೆಗಳ ಮೇಲ್ವಿಚಾರಣೆ, ಜಿಲ್ಲಾ ಮಟ್ಟದಲ್ಲಿ ಕಾರ್ಯಕ್ರಮಗಳು/ಯೋಜನೆಗಳ ಪರಿಣಾಮಕಾರಿ ಅನುಷ್ಠಾನವನ್ನು ಖಚಿತಪಡಿಸುವುದು, ಮುಂತಾದವುಗಳು ಪಿಎಸ್‌ಒ ಹೊಣೆಗಾರಿಕೆಯಾಗಿತ್ತು.

ಇದಲ್ಲದೆ ಪಿಎಸ್‌ಒ ಒಂದು ಕಾರ್ಯತಂತ್ರ ಅಭಿವೃದ್ಧಿ ಯೋಜನೆ (ಎಸ್‌ಡಿಪಿ), ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸೀಜರ್ಸ್ (ಎಸ್‌ಒಪಿ), ಮೂಲಸೌಕರ್ಯ ಯೋಜನೆಗಳ ನಕ್ಷೆಯನ್ನು ಅಭಿವೃದ್ಧಿಪಡಿಸುವುದು, ಎಲ್ಲಾ ತಾಂತ್ರಿಕ ಮತ್ತು ವಾಣಿಜ್ಯ ವಿಷಯಗಳ ಬಗ್ಗೆ ಸಲಹೆ ನೀಡುವುದು, ಒಟ್ಟಾರೆ ಆಡಳಿತ ಮತ್ತು ನಿಯಂತ್ರಣಗಳಲ್ಲಿ ಮಂಡಳಿಯನ್ನು ಬೆಂಬಲಿಸುವುದು, ಇತ್ಯಾದಿ ಸೇವೆಗಳನ್ನು ಒದಗಿಸಬೇಕು ಎಂದು ಮಾಸ್ಟರ್ ಸರ್ವಿಸ್ ಅಗ್ರಿಮೆಂಟ್ (ಎಮ್‌ಎಸ್‌ಎ) ನಿಗದಿಪಡಿಸಿತ್ತು. ಎಮ್‌ಎಸ್‌ಎಯನ್ನು ಜಾರಿಗೊಳಿಸಿದ 45 ದಿನಗಳ ಅವಧಿಯೊಳಗೆ ಸೇವಾ ಪೂರೈಕೆದಾರರು ಎಲ್ಲಾ ಪ್ರಮುಖ ಸಲಹೆಗಾರರಾದ ಖರೀದಿ ತಜ್ಞರು, ಹಣಕಾಸು ತಜ್ಞರು, ಹಿರಿಯ ಆದಾಯತೆರಿಗೆ ತಜ್ಞರನ್ನು ನಿಯೋಜಿಸದಿದ್ದರೆ ಅನ್ವಯವಾಗುವ ದಂಡದೊಂದಿಗೆ ಒಪ್ಪಂದವನ್ನು ರದ್ದಗೊಳಿಸಲಾಗುವುದು ಎಂದು ಒಪ್ಪಂದವು ನಿಗದಿಪಡಿಸಿತ್ತು.

ಎಮ್‌ಎಸ್‌ಎ ಅಡಿಯಲ್ಲಿ ನಿಗದಿಪಡಿಸಿರುವಂತೆ, ಪಿಎಸ್‌ಒ ಮಂಡಳಿಗೆ ಪ್ರಮುಖ ಸೇವೆಗಳನ್ನೂ ಒದಗಿಸಿರಲಿಲ್ಲ (ಎಸ್‌ಡಿಪಿ, ಎಸ್‌ಒಪಿ, ನಿಧಿಯ ಮೇಲ್ವಿಚಾರಣೆ, ತಾಲೂಕುವಾರು ದತ್ತಾಂಶ ಸಂಗ್ರಹಣೆ, ನೈಜ–ಸಮಯದ ಮಂಡಳಿಯ ವೆಚ್ಚ) ಅಥವಾ ಖರೀದಿ ತಜ್ಞರು, ಹಣಕಾಸು ತಜ್ಞರು ಮತ್ತು ಹಿರಿಯ ಆದಾಯತೆರಿಗೆ ತಜ್ಞರನ್ನೂ ನೇಮಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದಾಗ್ಯೂ, ಮಂಡಳಿಯು ಪಿಎಸ್‌ಒ ಸೇವೆಗಳನ್ನು ರದ್ದುಪಡಿಸಲಿಲ್ಲ, ಬದಲಿಗೆ ಡಿಸೆಂಬರ್ 2021ರಿಂದ ಮಾರ್ಚ್ 2022ರ ಅವಧಿಯಲ್ಲಿ ಸಂಸ್ಥೆಗೆ ₹6.07 ಕೋಟಿ ಮೊತ್ತವನ್ನು ಪಾವತಿಸಿತು. ಸಂಸ್ಥೆಯು ಪ್ರಮುಖ ಸಿಬ್ಬಂದಿಯನ್ನು ನಿಯೋಜಿಸದ ಕಾರಣ ಆ ತಜ್ಞರುಗಳ ಜವಾಬ್ದಾರಿಗಳನ್ನು ನಿರ್ವಹಿಸಲಾಗಲಿಲ್ಲ ಮತ್ತು ಸಂಸ್ಥೆಗೆ ಪಾವತಿ ಮಾಡಿದ ₹ 6.07 ಕೋಟಿ ಅಕ್ರಮವಾಗಿತ್ತು.

ಮುಂದಿನ 30 ವರ್ಷಗಳವರೆಗೆ ಕಾರ್ಯತಂತ್ರ ಯೋಜನೆಯನ್ನು ರೂಪಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಜುಲೈ 2022). ಡಾ.ನಂಜುಂಡಪ್ಪ ಸಮಿತಿಯ ವರದಿಯ ಅಧ್ಯಯನ, ಅದು ಗಮನ ಹರಿಸಿದ ಪ್ರಮುಖ ಕ್ಷೇತ್ರಗಳು, ಗಮನಹರಿಸಬೇಕಾದ ಪ್ರಸ್ತಾವಿತ ಕ್ಷೇತ್ರಗಳು, ಪ್ರಸ್ತಾವಿತ ಕ್ಷೇತ್ರಗಳಲ್ಲಿ ಅನುಷ್ಠಾನಗೊಳಿಸಬಹುದಾದ ಯೋಜನೆಗಳು, ಈ ಯೋಜನೆಗಳಲ್ಲಿ ಹೂಡಿಕೆಯ ಹಂತಗಳು, ಸರ್ಕಾರ ಮತ್ತು ಮಂಡಳಿಯ ಭಾಗವಹಿಸುವಿಕೆಯ ಆಧಾರದ ಮೇಲೆ ಈ ಯೋಜನೆಗಳನ್ನು ಹೇಗೆ ಕೈಗೆತ್ತಿಕೊಳ್ಳಬಹುದು, ಮುಂತಾದವುಗಳನ್ನು ಕಾರ್ಯತಂತ್ರ ಯೋಜನೆಯು ಒಳಗೊಂಡಿತ್ತು. ವರದಿಗಳನ್ನು ಮಂಡಳಿಯು ಅನುಮೋದಿಸಿತ್ತು ಮತ್ತು ಪ್ರಸ್ತಾವನೆಗಳನ್ನು ಪರಿಗಣಿಸಲು ವಿವಿಧ ಇಲಾಖೆಗಳಿಗೆ ಪತ್ರಗಳನ್ನು ಬರೆದಿತ್ತು.

ಆದರೆ, ಎಮ್‌ಎಸ್‌ಎ ನಿಗದಿಪಡಿಸಿದಂತೆ ತಜ್ಞರ ನೇಮಕಾತಿಯ ಬಗ್ಗೆ ಮಂಡಳಿಯ ಉತ್ತರವು ಮೌನವಾಗಿತ್ತು.

### *5.2.13 ಮಂಡಳಿಯ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ದಾಖಲೆಗಳ ಅನುಪಸ್ಥಿತಿ*

ರಾಜ್ಯಪಾಲರ ಆದೇಶದ ಆಧಾರದ ಮೇಲೆ ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯು ನವೆಂಬರ್ 2013ರಲ್ಲಿ ಪ್ರತ್ಯೇಕ ಕಾನೂನು ಘಟಕವಾಗಿ ಅಸ್ತಿತ್ವಕ್ಕೆ ಬಂದಿತು. ಹಿಂದಿನ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ (ಹೆಚ್‌ಕೆಡಿಬಿ) ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಸ್ವಾಧೀನಪಡಿಸಿಕೊಳ್ಳಲು ಮಂಡಳಿಗೆ ಅನುಮತಿ ನೀಡಲಾಗಿತ್ತು. ಆದ್ದರಿಂದ ಮಂಡಳಿಯು ಹಿಂದಿನ ಮಂಡಳಿಯ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಗುರುತಿಸಿ ಹೊಸ ಮಂಡಳಿಯ ಲೆಕ್ಕಪತ್ರಗಳಲ್ಲಿ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಸೇರಿಸುವುದು ಕಡ್ಡಾಯವಾಗಿತ್ತು. ಆದರೆ, ಮಂಡಳಿಯು ಈ ಕಾರ್ಯವನ್ನು ಮಾಡಿರಲಿಲ್ಲ. ತತ್ಪರಿಣಾಮವಾಗಿ ಪ್ರದೇಶದ ಅಭಿವೃದ್ಧಿಗಾಗಿ ರಚಿಸಲಾದ ಆಸ್ತಿಗಳ ಸೂಕ್ತವಾದ ತಪಶೀಲು ಪಟ್ಟಿ ಇರಲಿಲ್ಲ. ಇದು ಮಂಡಳಿಯ ಆಸ್ತಿಗಳ ಅನಧಿಕೃತ ಅತಿಕ್ರಮಣ/ಸ್ವಾಧೀನದ ಪ್ರಕರಣಗಳು ಗಮನಕ್ಕೆ ಬರದಿರುವ ಅಪಾಯದಿಂದ ಕೂಡಿತ್ತು.

ರಚನೆಯಾದಾಗಿನಿಂದಲೂ ಮಂಡಳಿಯ ಎಲ್ಲಾ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಸೇರಿಸಿ 2016–17ನೇ ಅವಧಿಗೆ ಅಡಾವೆಪಟ್ಟಿಯನ್ನು (ಬ್ಯಾಲೆನ್ಸ್‌ಶೀಟ್) ತಯಾರಿಸಲು ಮಂಡಳಿಯಿಂದ ಚಾರ್ಟರ್ಡ್ ಅಕೌಂಟೆಂಟ್‌ರವರನ್ನು ನೇಮಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಜುಲೈ 2022).

## 5.3 ಮಂಡಳಿಯ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

### *5.3.1 ಲೆಕ್ಕಪರಿಶೋಧಕರನ್ನು ನೇಮಕ ಮಾಡದಿರುವುದು*

ನಿಗದಿಪಡಿಸಿದ ರೂಪದಲ್ಲಿ ಮಂಡಳಿಯು ವಾರ್ಷಿಕ ಲೆಕ್ಕಪತ್ರಗಳ ತ:ಖ್ತೆಯನ್ನು ಸಿದ್ಧಪಡಿಸಬೇಕು ಮತ್ತು ರಾಜ್ಯ ಸರ್ಕಾರವು ನೇಮಿಸಬಹುದಾದ ಲೆಕ್ಕಪರಿಶೋಧಕರಿಂದ ವಾರ್ಷಿಕವಾಗಿ ಮಂಡಳಿಯ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡಿಸಬೇಕೆಂದು ಮಂಡಳಿ ಆದೇಶ 2013ರ ಷರತ್ತು 27

ನಿರ್ದಿಷ್ಟಪಡಿಸುತ್ತದೆ. ಲೆಕ್ಕಪರಿಶೋಧಕರ ವರದಿಯನ್ನು ಸ್ವೀಕರಿಸಿದ ನಂತರ, ಮಂಡಳಿಯು ಲೆಕ್ಕಪತ್ರಗಳ ವಾರ್ಷಿಕ ಹೇಳಿಕೆಯ ಪ್ರತಿಯನ್ನು ಲೆಕ್ಕಪರಿಶೋಧಕರ ವರದಿಯ ಪ್ರತಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಕಳುಹಿಸಬೇಕು ಮತ್ತು ನಿಗದಿಪಡಿಸಿದ ರೀತಿಯಲ್ಲಿ ಅಂತಹ ಖಾತೆಗಳ ವಾರ್ಷಿಕ ತ:ಖ್ತೆಯನ್ನು ಪ್ರಕಟಿಸಬೇಕು. ಇದಲ್ಲದೆ, ಲೆಕ್ಕಪರಿಶೋಧಕರ ವರದಿಯನ್ನು ಪರಿಶೀಲಿಸಿದ ನಂತರ ರಾಜ್ಯ ಸರ್ಕಾರವು ಸೂಕ್ತವೆಂದು ಭಾವಿಸುವ ನಿರ್ದೇಶನಗಳನ್ನು ಮಂಡಳಿಗೆ ನೀಡಬಹುದು ಮತ್ತು ಮಂಡಳಿಯು ಅಂತಹ ನಿರ್ದೇಶನಗಳನ್ನು ಅನುಸರಿಸಬೇಕು.

ಮಂಡಳಿಯ ರಚನೆಯಾದಾಗಿನಿಂದ ರಾಜ್ಯ ಸರ್ಕಾರವು ಮಂಡಳಿಯ ಲೆಕ್ಕಪರಿಶೋಧನೆಗಾಗಿ ಲೆಕ್ಕಪರಿಶೋಧಕರನ್ನು ನೇಮಿಸಿಲ್ಲದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮಂಡಳಿಯ ಖಾತೆಗಳ ಸಮಗ್ರ ಲೆಕ್ಕಪರಿಶೋಧನೆಗೆ ವ್ಯವಸ್ಥೆ ಮಾಡುವ ಬದಲು, ಇಬ್ಬರು[21] ಚಾರ್ಟರ್ಡ್ ಅಕೌಂಟೆಂಟ್‌ಗಳನ್ನು (ಸಿಎ) ಆಂತರಿಕ ಲೆಕ್ಕಪರಿಶೋಧಕರನ್ನಾಗಿ ಮಂಡಳಿಯು ನೇಮಿಸಿತು (ಫೆಬ್ರವರಿ 2016). ಸಿಎಗಳು ತಮ್ಮ ಲೆಕ್ಕಪರಿಶೋಧನಾ ವರದಿಯನ್ನು ಮಂಡಳಿಗೆ ಸಲ್ಲಿಸಿದ್ದಾರೆ. ಆದಾಗ್ಯೂ, ನಿಗದಿಪಡಿಸಿದಂತೆ, ಮಂಡಳಿಯು ರಾಜ್ಯ ವಿಧಾನಮಂಡಲದಲ್ಲಿ ಮಂಡಿಸಲು ಲೆಕ್ಕಪರಿಶೋಧಿತ ಹಣಕಾಸು ತ:ಖ್ತೆಗಳನ್ನು ಸರ್ಕಾರಕ್ಕೆ ಸಲ್ಲಿಸಿರಲಿಲ್ಲ.

ಆಂತರಿಕ ಹಣಕಾಸು ನಿಯಂತ್ರಣ ಮತ್ತು ಶಿಸ್ತನ್ನು ಹೊಂದಲು ಹಾಗೂ ಮಂಡಳಿಯ ಮತ್ತು ಎಲ್ಲಾ ಅನುಷ್ಠಾನ ಏಜೆನ್ಸಿಗಳ ಆಂತರಿಕ ಲೆಕ್ಕಪರಿಶೋಧನೆ ನಡೆಸಲು ಮಂಡಳಿಯು ಚಾರ್ಟರ್ಡ್ ಅಕೌಂಟೆಂಟ್‌ಗಳನ್ನು ನೇಮಿಸಿತು ಎಂದು ಸರ್ಕಾರವು ಉತ್ತರಿಸಿತು (ಜುಲೈ 2022). 2020–21ರವರೆಗೆ ಆಂತರಿಕ ಲೆಕ್ಕಪರಿಶೋಧನೆಯು ಪೂರ್ಣಗೊಂಡಿದ್ದು, ವರದಿಗಳನ್ನು ಜಾರಿಗೊಳಿಸಲಾಗಿದೆ, 2021–22ರ ಲೆಕ್ಕಪರಿಶೋಧನೆಯು ಪ್ರಾರಂಭವಾಗಿದೆ ಎಂದು ತಿಳಿಸಲಾಯಿತು. 2017–18, 2018–19 ಮತ್ತು 2019–20ರ ಅವಧಿಯ ಆಂತರಿಕ ಲೆಕ್ಕಪರಿಶೋಧನಾ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದೂ ಸಹ ತಿಳಿಸಲಾಯಿತು.

ಲೆಕ್ಕಪತ್ರಗಳನ್ನು ಸಿದ್ಧಪಡಿಸಲು ಮತ್ತು ಆಂತರಿಕ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲು ಲೆಕ್ಕಪರಿಶೋಧಕರನ್ನು ಮಂಡಳಿಯು ನೇಮಿಸಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ರಾಜ್ಯ ಸರ್ಕಾರವು ಮಂಡಳಿ ಆದೇಶ 2013ರಡಿಯಲ್ಲಿ ಅಧಿಕಾರವನ್ನು ಚಲಾಯಿಸುವ ಲೆಕ್ಕಪತ್ರಗಳ ತಯಾರಿಕೆಯಲ್ಲಿ ಭಾಗಿಯಾಗಿರದ ಸ್ವತಂತ್ರ ಮೂರನೇ ವ್ಯಕ್ತಿ ಲೆಕ್ಕಪರಿಶೋಧಕರನ್ನು ನೇಮಿಸಬೇಕು.

***ಶಿಫಾರಸು–7: ಮಂಡಳಿಯು ಅನುಷ್ಠಾನಗೊಳಿಸುವ ಏಜೆನ್ಸಿಗಳಿಗೆ ನಿಧಿಯ ಬಿಡುಗಡೆಯನ್ನು ನಿಯಂತ್ರಿಸಬೇಕು ಮತ್ತು ಮಂಡಳಿಯಿಂದ ಬಿಡುಗಡೆಯಾದ ನಿಧಿಯ ಮೇಲೆ ಸಂಗ್ರಹವಾದ ಬಡ್ಡಿಯ ಮರುಪಾವತಿಗೆ ಒತ್ತಾಯಿಸಬೇಕು.***

***ಶಿಫಾರಸು–8: ಮಂಡಳಿಯ ಲೆಕ್ಕಪತ್ರಗಳನ್ನು ಸಮಯೋಚಿತವಾಗಿ ಪೂರ್ಣಗೊಳಿಸುವುದನ್ನು ಮತ್ತು ಲೆಕ್ಕಪರಿಶೋಧನೆ ಮೂಲಕ ಪ್ರಮಾಣೀಕರಿಸುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು.***

[21] 2015–16 ಮತ್ತು 2016–17ಕ್ಕೆ ಬೀದರ್, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಕೆ.ಕೆ.ಅಟಲ್ ಮತ್ತು ಅಸೋಸಿಯೇಟ್ಸ್ ಹಾಗೂ 2014–15 ಮತ್ತು 2015–16ರ ಅವಧಿಗೆ ರಾಯಚೂರು, ಯಾದಗಿರಿ ಮತ್ತು ಕಲಬುರಗಿ ಜಿಲ್ಲೆಗಳಿಗೆ ಶೇಖರ್ ಪಟೇಲ್ ಮತ್ತು ಕಂಪನಿ.